**ಕರ್ನಾಟಕ ಸರ್ಕಾರ**
**ಪೊಲೀಸ್ ಇಲಾಖೆ**

# ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು ರವರ ನಡವಳಿಗಳು.

ವಿಷಯ:- ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) ಹುದ್ದೆಗಳ ಆಯ್ಕೆಯ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯಲ್ಲಿ ಅಕ್ರಮವೆಸಗಿರುವ ಹಿನ್ನೆಲೆಯಲ್ಲಿ ಮುಂದಿನ ಪರೀಕ್ಷೆಗಳಿಗೆ ನಿಷೇಧಿಸುವ ಬಗ್ಗೆ.

ಉಲ್ಲೇಖ:- 1) ಪೊಲೀಸ್ ಆಯುಕ್ತರು, ಬೆಳಗಾವಿ ನಗರ ರವರ ಪತ್ರ ಸಂಖ್ಯೆ: ಸಿಬ್ಬಂದಿ-1/ನೇಮಕಾತಿ/ಇಟಿ/ಪಿಎಸ್‌ಟಿ/469/2021-22 ದಿನಾಂಕ: 13.08.2021.

2) ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಅಪರಾಧ ಪ್ರಕರಣ ಸಂಖ್ಯೆ: 0106/2021 ಕಲಂ 420, 511, ಐಪಿಸಿ 1860 ರಡಿಯಲ್ಲಿ ದಿನಾಂಕ: 12.08.2021.

ಪ್ರಸ್ತಾವನೆ:-

ಅಧಿಸೂಚನೆ ಸಂಖ್ಯೆ: 98/ನೇಮಕಾತಿ-2/2020-21 ದಿನಾಂಕ: 21.01.2021 ರನ್ವಯ ಕೈಗೊಳ್ಳಲಾಗಿರುವ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ & ಮಹಿಳಾ) ಹಾಗೂ ಸೇವಾನಿರತ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ:12.08.2021 ರಂದು ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳನ್ನು 2ನೇ ಪಡೆ, ಕೆ.ಎಸ್.ಆರ್.ಪಿ, ಬೆಳಗಾವಿ ಕೇಂದ್ರದಲ್ಲಿ ನಡೆಸಲಾಗಿರುತ್ತದೆ.

ಸದರಿ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳಿಗೆ 2ನೇ ಪಡೆ, ಕೆ.ಎಸ್.ಆರ್.ಪಿ, ಬೆಳಗಾವಿ ಕೇಂದ್ರದಲ್ಲಿ ಹಾಜರಾಗಿದ್ದ ಬಿ.ಎಸ್.ದುರದುಂಡಿ, ಅರ್ಜಿ ಸಂಖ್ಯೆ: 2299067 ಮತ್ತು 5092573 ರವರು ತನ್ನ ಎತ್ತರ ಕಡಿಮೆ ಇದೆ ಅಂತಾ ಗೊತ್ತಿದ್ದರೂ ಸಹ ನೇಮಕಾತಿ ಪ್ರಾಧಿಕಾರಕ್ಕೆ ಮೋಸ ಮಾಡಿ ಅರ್ಹತೆ ಗಿಟ್ಟಿಸಿಕೊಳ್ಳುವ ಉದ್ದೇಶದಿಂದ ತನ್ನ ತಲೆಯ ಮೇಲೆ ಥರ್ಮಾಕೋಲ್ 3 ತುಣುಕುಗಳು ಹಾಗೂ ಅದರ ಮೇಲೆ ಕೂದಲಿನ ವಿಗ್ ಹಾಕಿಕೊಂಡು ನೇಮಕಾತಿ ಹೊಂದಲು ಪ್ರಯತ್ನಿಸಿದ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಅಪರಾಧ ಪ್ರಕರಣ ಸಂಖ್ಯೆ: 0106/2021 ಕಲಂ 420, 511, ಐಪಿಸಿ 1860 ರಡಿಯಲ್ಲಿ ದಿನಾಂಕ: 12.08.2021 ರಂದು ಪ್ರಕರಣವು ದಾಖಲಾಗಿರುತ್ತದೆ.

ಪೊಲೀಸ್ ಸಬ್-ಇನ್ಸ್‌ಪೆಕ್ಟರ್(ಸಿವಿಲ್) ಹುದ್ದೆಗಳ ಆಯ್ಕೆ ಸಲುವಾಗಿ ಅಧಿಕೃತವಾಗಿ ಪ್ರಕಟಿಸಲಾಗಿರುವ ನೇಮಕಾತಿ ಅಧಿಸೂಚನೆಯ ಕ್ರಮ ಸಂಖ್ಯೆ: 18 ರ ವಿಶೇಷ ಸೂಚನೆಗಳ ಉಪ ಕಂಡಿಕೆ (ಎಸ್) ರಲ್ಲಿನ **ದುರ್ನಡತೆಯಲ್ಲಿ:** "ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂದು, ತಪ್ಪಿತಸ್ಥನೆಂದು ಕಂಡುಬಂದಲ್ಲಿ ಅಥವಾ ಒಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗಳಿಗೆ ಹಾಜರಾಗಿರುವ ವಿಷಯವನ್ನು ಮರೆಮಾಚಿ ಮತ್ತೊಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗೆ ಹಾಜರಾದರೆ ಹಾಗೂ ನೇಮಕಾತಿ ಸಮಿತಿಯಿಂದ ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ನೇಮಕಾತಿ ಸಮಿತಿ ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದೆಂದು" ತಿಳಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಹಾಗೂ ಅಧಿಸೂಚನೆಯಲ್ಲಿನ ನಿಬಂಧನೆಗಳನ್ನು ಪರಿಶೀಲಿಸಿ, ನೇಮಕಾತಿ ಕಛೇರಿಯ ಮುಖ್ಯಸ್ಥರಾದ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, (ನೇಮಕಾತಿ) ಆದ ನಾನು ಈ ಕೆಳಕಂಡಂತೆ ಆದೇಶಿಸುತ್ತೇನೆ.

**ಆದೇಶ ಸಂಖ್ಯೆ: 98/ನೇಮಕಾತಿ-2/2020-21, ದಿನಾಂಕ: .08.2021**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಪೊಲೀಸ್ ಸಬ್-ಇನ್ಸ್‌ಪೆಕ್ಟರ್(ಸಿವಿಲ್) ಹುದ್ದೆಗಳ ಆಯ್ಕೆ ಸಲುವಾಗಿ ನಡೆಸಲಾದ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳಿಗೆ ಹಾಜರಾಗಿದ್ದ ಬಿ.ಎಸ್.ದುರದುಂಡಿ, ಅರ್ಜಿ ಸಂಖ್ಯೆ: 2299067 ಮತ್ತು 5092573 ರವರು ತನ್ನ ಎತ್ತರ ಕಡಿಮೆ ಇದೆ ಅಂತಾ ಗೊತ್ತಿದ್ದರೂ ಸಹ ನೇಮಕಾತಿ ಪ್ರಾಧಿಕಾರಕ್ಕೆ ಮೋಸ ಮಾಡಿ ಅರ್ಹತೆ ಗಿಟ್ಟಿಸಿಕೊಳ್ಳುವ ಉದ್ದೇಶದಿಂದ ತನ್ನ ತಲೆಯ ಮೇಲೆ ಥರ್ಮಾಕೋಲ್ 3 ತುಣುಕುಗಳು ಹಾಗೂ ಅದರ ಮೇಲೆ ಕೂದಲಿನ ವಿಗ್ ಹಾಕಿಕೊಂಡು ನೇಮಕಾತಿ ಹೊಂದಲು ಪ್ರಯತ್ನಿಸಿದ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಅಪರಾಧ ಪ್ರಕರಣ ಸಂಖ್ಯೆ: 0106/2021 ಕಲಂ 420, 511, ಐಪಿಸಿ 1860 ರಡಿಯಲ್ಲಿ ದಿನಾಂಕ: 12.08.2021 ರಂದು ಪ್ರಕರಣವು ದಾಖಲಾಗಿರುತ್ತದೆ. ಸದರಿ ಅಭ್ಯರ್ಥಿಯ ವಿರುದ್ಧ ಇಲಾಖೆಯು ಈ ಕೆಳಕಂಡಂತೆ ಶಿಸ್ತು ಕ್ರಮ ಜರುಗಿಸಿರುತ್ತದೆ.

| ಕ್ರ ಸಂ. | ಅಭ್ಯರ್ಥಿಯ ಹೆಸರು | ಅರ್ಜಿ ಸಂಖ್ಯೆ | ಇಲಾಖೆಯು ತೆಗೆದುಕೊಂಡ ಶಿಸ್ತು ಕ್ರಮ |
|---|---|---|---|
| | 1 | 2 | 3 |
| 1 | ಶ್ರೀ ಬಾಲೇಶ್ ದುರದುಂಡಿ | ಅರ್ಜಿ ಸಂಖ್ಯೆ: 2299067 ಮತ್ತು 5092573 | ಪೊಲೀಸ್ ಇಲಾಖೆಯು ನಡೆಸುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಖಾಯಂ ಆಗಿ ಡಿಬಾರ್ ಮಾಡಲಾಗಿದೆ. |

ಈ ಮೇಲ್ಕಂಡ ಅಭ್ಯರ್ಥಿಗೆ ಮೇಲಿನ ವಿವರ ಪಟ್ಟಿಯಲ್ಲಿನ ಕ್ರಮ ಸಂಖ್ಯೆ: 3 ರ ಕಾಲಂನಲ್ಲಿ ತಿಳಿಸಿರುವಂತೆ ಪೊಲೀಸ್ ಇಲಾಖೆಯು ನಡೆಸುವ ಎಲ್ಲಾ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಗಳಿಗೆ ಖಾಯಂ ಆಗಿ ಡಿಬಾರ್ ಮಾಡಲಾಗಿದೆ.

(ಅಮ್ರಿತ್ ಪಾಲ್, ಐಪಿಎಸ್)
ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ, ಬೆಂಗಳೂರು

ಗೆ,

ಶ್ರೀ ಬಾಲೇಶ್ ದುರದುಂಡಿ, ತಂದೆ: ಸಣ್ಣಪ್ಪ, ಜಾಗನೂರ ಅಂಚೆ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ-591305.

<u>ಪ್ರತಿಯನ್ನು:-</u> ಎಲ್ಲಾ ಘಟಕಾಧಿಕಾರಿಗಳಿಗೆ (ನಿಸ್ತಂತು ಅಧಿಕಾರಿ, ಸಿಐಡಿ ಕಛೇರಿ, ಬೆಂಗಳೂರು ರವರಿಗೆ ಶೀಘ್ರ ರವಾನೆಗಾಗಿ)

<u>ಪ್ರತಿಯನ್ನು ಮಾಹಿತಿಗಾಗಿ ಅಭಿನಂದನೆಗಳೊಂದಿಗೆ:-</u> ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.